## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕನ್ನಡ ಆಡಳಿತ ಭಾಷಾ ಕಾವಲು ಸಮಿತಿಯ ರಚನೆ - ಅಧ್ಯಕ್ಷರಿಗೆ ರಾಜ್ಯಮಂತ್ರಿಯವರ ಪದವಿ ಕೊಟ್ಟು ವೇತನ ಮತ್ತು ಇನ್ನಿತರ ಸೌಲಭ್ಯ ಮಂಜೂರಾತಿ ನೀಡುವ ಬಗ್ಗೆ.

ಉಲ್ಲೇಖ :- 1) ಸುತ್ತೋಲೆ ಕ್ರಮಾಂಕ; ಡಿಪಿ.ಎ.ಆರ್. 8 ಪಿ.ಒ.ಎಲ್ 83, ದಿನಾಂಕ 10ನೇ ಫೆಬ್ರವರಿ 1983.

2) ಸರ್ಕಾರಿ ಆದೇಶ ಕ್ರಮಾಂಕ ಡಿಪಿ.ಎ.ಆರ್. 27 ಪಿ.ಒ.ಎಲ್ 83 ದಿನಾಂಕ 23ನೇ ಜೂನ್ 1983.

**ಪ್ರಸ್ತಾವನೆ :**

ಉಲ್ಲೇಖ (1)ರಲ್ಲಿನ ಸುತ್ತೋಲೆಯಲ್ಲಿ ದಿನಾಂಕ 15ನೇ ಫೆಬ್ರವರಿ 1983ರಿಂದ ರಾಜ್ಯದ ಎಲ್ಲ ಹಂತಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಲಾಗಿದೆ. ಉಲ್ಲೇಖ (2)ರಲ್ಲಿನ ಆದೇಶದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಪ್ರಯೋಗದಲ್ಲಿ ತರುವಲ್ಲಿ ಕಂಡುಬರಬಹುದಾದ ನ್ಯೂನತೆಗಳನ್ನು ಪರಿಶೀಲಿಸಿ ಸರಿಪಡಿಸುವ ಸಲುವಾಗಿ ಶಾಸಕರಾದ ಶ್ರೀ ಸಿದ್ಧರಾಮಯ್ಯನವರ ಅಧ್ಯಕ್ಷತೆಯಲ್ಲಿ ಕನ್ನಡ ಆಡಳಿತ ಭಾಷಾ ಕಾವಲು ಸಮಿತಿಯನ್ನು ರಚಿಸಲಾಗಿದೆ. ಸಮಿತಿಯ ಅಧ್ಯಕ್ಷರಾಗಿ ರಾಜ್ಯಮಂತ್ರಿ ಯವರ ಪದವಿ ಮತ್ತು ಎಲ್ಲ ಸೌಲಭ್ಯಗಳನ್ನು ಮಂಜೂರು ಮಾಡಬೇಕೆಂದು ಸರ್ಕಾರವು ತೀರ್ಮಾನಿಸಿದೆ.

ಆದೇಶ ಕ್ರಮಾಂಕ ಡಿಪಿ.ಎ.ಆರ್ 27 ಪಿ.ಒ.ಎಲ್ 1983,

ಬೆಂಗಳೂರು, ದಿನಾಂಕ 8ನೇ ಆಗಸ್ಟ್ 1983.

ಕನ್ನಡ ಆಡಳಿತ ಭಾಷಾ ಕಾವಲು ಸಮಿತಿಯ ಅಧ್ಯಕ್ಷರಿಗೆ ಕರ್ನಾಟಕ ರಾಜ್ಯದ ರಾಜ್ಯ ಮಂತ್ರಿಯವರ ಪದವಿಯನ್ನು ಕೊಟ್ಟು ಕರ್ನಾಟಕ ಮಂತ್ರಿಗಳವರ ವೇತನ ಮತ್ತು ಭತ್ಯ ಅಧಿನಿಯಮ, 1956 ಮತ್ತು ಅಧಿನಿಯಮದಡಿ ಮಾಡಿದ ನಿಯಮಾವಳಿಗಳ ಪ್ರಕಾರ ರಾಜ್ಯ ಮಂತ್ರಿಯವರಿಗೆ ಸಿಗಬಹುದಾದ ವೇತನ, ಭತ್ಯ

ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯಲು ಸರ್ಕಾರವು ಮಂಜೂರಾತಿ ನೀಡಿದೆ.

ಈ ಬಗ್ಗೆ ಉಂಟಾಗುವ ಖರ್ಚನ್ನು ''252 - ಸಚಿವಾಲಯ ಸಾಮಾನ್ಯ ಸೇವೆ - 1 ಸಚಿವಾಲಯ - 2 ಸಮಿತಿಗಳು ಮತ್ತು ಸಮ್ಮೇಳನಗಳು, ನ್ಯಾಯಾಧಿಕರಣಗಳು ಮೊದಲಾದವುಗಳಿಗೆ ಸಂಬಂಧಪಟ್ಟ ವೆಚ್ಚ (ಯೋಜನೇತರ)''ಕ್ಕೆ ಸೇರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಒಪ್ಪಿಗೆಯನ್ನು ಅನಧಿಕೃತ ಟಿಪ್ಪಣಿ ಕ್ರಮಾಂಕ ಎಫ್‌ಡಿ 1917 ವೆಚ್ಚ - 7/83 ದಿನಾಂಕ 8ನೇ ಆಗಸ್ಟ್ 83ರ ಅನಧಿಕೃತ ಟಿಪ್ಪಣಿಯಲ್ಲಿ ಪಡೆದು ಹೊರಡಿಸಲಾಗಿದೆ.

ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಸಹಿ/-

**(ತೆ. ರಾಮಚಂದ್ರ ಬಾಧ್ಯ)**

ಉಪ ಕಾರ್ಯದರ್ಶಿ,

ಸಚಿವ ಸಂಪುಟ ವ್ಯವಹಾರ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ).